# ಶ್ರೀಮಾತೆಯವರೊಡನೆ ಮಾತುಕತೆ



## ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

೩೧.೧.೧೯೧೩

೧೭.೧.೧೯೧೩ ರಂದು ಶ್ರೀಮಾತೆ ಕಾಶಿಯಿಂದ ಹಿಂದಿರುಗಿದರು. ಅವತ್ತು ನಾನು ಮುಂಜಾನೆಯೇ ಹೋಗಿದ್ದೆ. ಶ್ರೀಮಾತೆ ಪೂಜೆಯಲ್ಲಿ ತನ್ಮಯರಾಗಿದ್ದಾರೆ. ಪ್ರಾಯಶಃ ಮುಗಿದಿದೆ. ನಂತರ ನನ್ನನ್ನು ಕಂಡು "ಏನಮ್ಮಾ, ಬಂದೆಯಾ, ನಾನೆಂದುಕೊಂಡಿದ್ದೆ ನೋಡಲು ಆಗುತ್ತದೆಯೊ ಇಲ್ಲವೊ" ಎಂದು ಹೇಳಿದರು. ಸದ್ಯದಲ್ಲೇ ತವರುಮನೆಗೆ ಹೋಗುತ್ತೇನೆ. ನೈವೇದ್ಯಕ್ಕಾಗಿ ಸ್ವಲ್ಪ ಅಡುಗೆ ಮಾಡಿ ತೆಗೆದುಕೊಂಡು ಹೋಗಿದ್ದೆ. ಅದನ್ನು ನೋಡಿ "ಇಂದು ಶ್ರೀರಾಮಕೃಷ್ಣರಿಗೆ ಕಡಮೆ ಸಿಹಿ ಇರುವುದನ್ನು ನೋಡಿ ಒಂದು ಥರ ಆಗಿತ್ತು. ನಿಜವಾಗಿ ತಮ್ಮ ವ್ಯವಸ್ಥೆಯನ್ನು ತಾವೇ ಹೇಗೆ ಮಾಡಿಕೊಳ್ಳುತ್ತಾರೆ ನೋಡು! ಸಿಹಿತಿಂಡಿ, ಮೇಲಾಗಿ ಮನೆಯಲ್ಲಿ ಮಾಡಿದ್ದು, ಇನ್ನೇನು ಬೇಕು?" ಎಂದರು. ನೈವೇದ್ಯದ ನಂತರ ಊಟದೆಲೆಯಲ್ಲಿ ಅದನ್ನು ಎಲ್ಲರಿಗೂ ಕೊಡಲಾರಂಭಿಸಿದರು. ಕಾಲಿಮಾವನ ಮಗ ಆಕ್ಷೇಪಿಸುತ್ತಾ "ಇಷ್ಟೊಂದು ಯಾರಿಗೆ?" ಎಂದನು. ಶ್ರೀಮಾತೆ ನಗುತ್ತಾ "ಹುಡುಗು ಬುದ್ಧಿ, ನೋಡು. ಕೆಳಗಡೆ ಇರುವ ಭಕ್ತರಿಗೆ ಕೊಟ್ಟು ಬಾ, ಹೋಗು" ಎಂದರು.

ರಾಂಚಿಯಿಂದ ಬಂದಿದ್ದ ಭಕ್ತನೊಬ್ಬ ಶ್ರೀಮಾತೆಗೆ ನಮಸ್ಕರಿಸಿ ಹೂವಿನ ಹಾರವೊಂದನ್ನು ಕೊಟ್ಟನು; ಪದತಲದಲ್ಲಿ ನಾಣ್ಯವೊಂದನ್ನು ಇಡುತ್ತಾ "ಸುರೇನ್ ಇದನ್ನು ನಿಮಗೆ ಕೊಟ್ಟಿದ್ದಾನೆ" ಎಂದನು.

ಶಾಲೆಗೆ ಸಮಯವಾಗಲು ರಾಧು ಊಟ ಮುಗಿಸಿ ಸಮವಸ್ತ್ರ ಧರಿಸಿ ಹೊರಡಲನುವಾದಳು (ರಾಧು ಆ ಸಮಯದಲ್ಲಿ ಮನೆಯ ಬಳಿ ಇದ್ದ ಮಿಷನರಿ ಶಾಲೆಗೆ ಹೋಗುತ್ತಿದ್ದಳು). ಆ ಸಮಯಕ್ಕೆ ಸರಿಯಾಗಿ ಗೋಲಾಪ್ ಮಾ ಬಂದು ನೋಡಿ, "ಹುಡುಗಿ ದೊಡ್ಡವಳಾಗಿದ್ದಾಳೆ. ಈಗಲೂ ಸ್ಕೂಲಿಗೆ ಹೋಗುವುದೆಂದರೇನು?" ಎಂದು ತನ್ನ ಸ್ವಭಾವಸಿದ್ಧ ಜೋರಿನಿಂದ ಹೇಳಿ ರಾಧುವನ್ನು ಗದರಿಸಿದಳು. ರಾಧು ಅಳಲಾರಂಭಿಸಿದಳು. ಶ್ರೀಮಾತೆ, "ಏನು ಮಹಾ ದೊಡ್ಡವಳಾಗಿದ್ದಾಳೆ? ಹೋಗಲಿ ಬಿಡು. ಓದು, ಬರಹ, ಕಸೂತಿ ಕಲಿತರೆ ಎಷ್ಟು ಸಹಾಯ ಆಗುತ್ತದೆ. ಆ ಹಳ್ಳಿಯಲ್ಲೂ ಸಹ ತನಗೆ ಮತ್ತು ಇತರರಿಗೆ ಎಷ್ಟು ಉಪಕಾರ ಮಾಡಬಲ್ಲಳು. ಏನಮ್ಮಾ ಹೇಳು?" ಎಂದು ಹೇಳಿ ಮಧ್ಯ ಪ್ರವೇಶಿಸಿದಾಗ, ರಾಧು ಸ್ಕೂಲಿಗೆ ಹೊರಟಳು.

ಅನ್ನಪೂರ್ಣಳ ತಾಯಿ ಒಂದು ಹುಡುಗಿಯನ್ನು ದೀಕ್ಷೆಗಾಗಿ ಕರೆದುಕೊಂಡು ಬಂದಿದ್ದಾಳೆ. "ಅಮ್ಮಾ, ನಿಮ್ಮ ಬಳಿ ದೀಕ್ಷೆ ಕೊಡಿಸಲು ನನ್ನನ್ನು ಬಹಳ ಒತ್ತಾಯ ಮಾಡುತ್ತಿದ್ದಾಳೆ. ವಿಧಿಯಿಲ್ಲದೆ ಕರೆದು ತಂದೆ" ಎಂದು ಹೇಳಿದಳು.

**ಶ್ರೀಮಾತೆ** : "ಈಗಾಗಲೇ ಪ್ರಸಾದ ತೆಗೆದುಕೊಂಡಿದ್ದೇನೆ. ಇವತ್ತು ಹೇಗಾಗುತ್ತೆ?"

**ಅನ್ನಪೂರ್ಣಳ ತಾಯಿ** : "ಅವಳು ಉಪವಾಸ ಇದ್ದಾಳೆ. ಅದಲ್ಲದೆ ನೀವು ತಿಂದರೆ ಅದರಲ್ಲಿ ದೋಷವಿಲ್ಲ."

**ಶ್ರೀಮಾತೆ** : "ನಿಜವಾಗಿಯೂ ಅವಳಿಗೆ ದೀಕ್ಷೆ ಬೇಕೇ?"

**ಅನ್ನಪೂರ್ಣಳ ತಾಯಿ** : "ಹೌದು ಅಮ್ಮಾ, ಮನಸ್ಸನ್ನು ಸ್ಥಿರಮಾಡಿಕೊಂಡು ಬಂದಿದ್ದಾಳೆ."

ಶ್ರೀಮಾತೆ ಅದಕ್ಕೆ ಒಪ್ಪಿ ದೀಕ್ಷೆ ನೀಡಿದರು. ಅವಳು ಶ್ರೀಮಾತೆಯ ಬಗ್ಗೆ ಪುಸ್ತಕ ಓದಿ, ಕೂದಲು ಕತ್ತರಿಸಿಕೊಂಡು ಪುರುಷರಂತೆ ವೇಷಧರಿಸಿ ತಪಸ್ಸಿಗಾಗಿ ವೈದ್ಯನಾಥಕ್ಕೆ ಹೋಗಿದ್ದಾಳೆ! ಅಲ್ಲಿ ಕಾಡಿನ ಮಧ್ಯದಲ್ಲಿ ವಾಸ! ಅದೃಷ್ಟವಶಾತ್ ಅವಳ ತಾಯಿಯ ಗುರು ಅವಳನ್ನು ನೋಡಿ ಗುರುತಿಸಿ, ತಮ್ಮ ಬಳಿ ಇಟ್ಟುಕೊಂಡರು. ನಂತರ ಇವಳ ತಂದೆಗೆ ಸಮಾಚಾರ ಕಳುಹಿಸಿದಾಗ, ಆತ ಹೋಗಿ ಕರೆದುಕೊಂಡು ಬಂದರಂತೆ! – ಈ ವಿಚಾರವನ್ನು ಅನ್ನಪೂರ್ಣಳ ತಾಯಿ ಹೇಳಿದಾಗ ಶ್ರೀಮಾತೆಯು ಗಂಭೀರವಾಗಿ ಕೇಳಿದರು. ನಂತರ "ಆಹಾ! ಎಂತಹ ಭಕ್ತಿ" ಎಂದಷ್ಟೇ ಹೇಳಿದರು.

ಅಷ್ಟರಲ್ಲಿ ಇತರರು, "ಆ ಭಕ್ತಿ ಹಾಗಿರಲಿ, ಇಂತಹ ಸುಕುಮಾರಿ ಅದು ಹೇಗೆ ಬೀದಿಯಲ್ಲಿ ಒಬ್ಬಳೇ ನಡೆದು ಹೋದಳು?!" ಎಂದೆಲ್ಲಾ ಹೇಳತೊಡಗಿದರು.

**ನಳಿನಿ:** "ಅಬ್ಬಾ! ನಮ್ಮ ಹಳ್ಳಿಯಲ್ಲಿ ಹೀಗಾಗಿದ್ದರೆ ಕಥೆ ಮುಗಿದು ಹೋಗುತ್ತಿತ್ತು!" ಎಂದಳು.

ಈ ಮಾತುಗಳು ಆ ಹುಡುಗಿಯ ಕಿವಿಗೆ ಬೀಳಲಿಲ್ಲ.

*(ಮುಂದುವರಿಯುವುದು)*